ಹೇಗೆ ? ಅನೇಕ ಸಾರಿ ಇಲ್ಲಿ ಯಾರು ಇರದಿದ್ದರೂ ಅಧ್ಯಕ್ಷರು ಹೌಸನ್ನು ಅಡ್ಜರ್ನ್ ಮಾಡಿ ಮತ್ತೆ ನಿಮ್ಮನ್ನೆಲ್ಲಾ ಒಂದು ಕಡೆ ಸೇರಿಸಿ, ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟು, ಸಾಕಷ್ಟು ಸಲ ಅವರನ್ನು ರಕ್ಷಣೆ ಮಾಡಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್ : ಅಂಥ ಸ್ಪೀಕರ್ ಇರುವುದರಿಂದಲೇ ನಾನು ಆಗಾಗ ಕುಸಿದು ಬೀಳುವವರ ರೀತಿಯಲ್ಲಿ ನಾಟಕ ಮಾಡುತ್ತಿದ್ದುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಎಲ್ಲದಕ್ಕೂ ಒಂದೇ ಉತ್ತರವನ್ನು ಹೇಳುತ್ತಾರೆ. ಮಾನ್ಯ ಅಧ್ಯಕ್ಷರು ಇದನ್ನು ಗ್ಯಾಂಟ್ ಎಂದು ತಿಳಿದುಕೊಳ್ಳಿ. ಅಧ್ಯಕ್ಷರಿದ್ದಾರೆಂದೇ ಈ ರೀತಿ ನಾನು ಮಾತನಾಡುತ್ತೇನೆಂದು ಹೇಳಿದ್ದಾರೆಂದರೆ, ಸದಾ ನಮ್ಮ ಮೇಲೆ ಆಶೀರ್ವಾದ ಇದೆ ಎಂದು ಅವರು ತಿಳಿದು ಕೊಂಡಿದ್ದಾರೆ. ಏಕೆಂದರೆ, ಇದರ ಮಧ್ಯೆ ಒಂದು ರಾಂಗ್ ಮೆಸೇಜ್ ಹೋಗುವುದು ಬೇಡ. ಅವರು ಇದರಲ್ಲಿ ಇನ್ವಾಲ್ವ್ ಆಗದೇ ಇದ್ದಾಗ, whether this is a viable project, whether people of Bangalore can bear the burden be made clear.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಇವತ್ತೇ ಬಿ.ಡಿ.ಎ. ಬಿಲ್‌ನ್ನು ಮುಗಿಸಿ.

(ಗೊಂದಲ)

5. ಶಾಸಕರುಗಳ ಕ್ಷೇತ್ರಗಳಿಗೆ ಅನುದಾನಕ್ಕೆ ಒತ್ತಾಯ

ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ) : ಅಧ್ಯಕ್ಷರೇ ಶಾಸಕರಿಗೆ ಅನುದಾನ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇದು ತಮಗೂ ಮತ್ತು ಸದನದ ಎಲ್ಲಾ ಶಾಸಕರಿಗೂ ಬಹಳ ಪ್ರಾಮುಖ್ಯವಾದದು. ಕೊನೇಪಕ್ಷ ಮಾನ್ಯ ಮುಖ್ಯಮಂತ್ರಿಗಳು ಒಂದು ರೂಪಾಯಿಯನ್ನಾದರೂ ಕೊಡುತ್ತೇವೆಂದು ಹೇಳಬೇಕು. ಇದನ್ನು ಈ ಸಾರಿಯಿಂದಲೇ ಕೊಡುತ್ತೇವೆಂದು ತಾವು ಹೇಳಬೇಕೆಂದು. ನಾನು ಬಹಳ ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ. ಶಾಸಕರಿಗೆ ಅನುದಾನ ಕೊಡತಕ್ಕಂಥದ್ದು ಬಹಳ ಪ್ರಮುಖವಾದಂತಹ ವಿಷಯವಾಗಿದೆ ಮತ್ತು ಇವತ್ತು ಪಾರ್ಲಿಮೆಂಟರಿ ಸದಸ್ಯರಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಮಗೆ ಕನಿಷ್ಟಪಕ್ಷ ಒಂದು ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಕೊಡುವುದಕ್ಕೆ ಆಗುವುದಿಲ್ಲವೆಂದರೆ, ನಿಜವಾಗಿಯೂ ಸರ್ಕಾರಕ್ಕೆ ಶಾಸಕರ ಬಗ್ಗೆ, ಕಾಳಜಿ ಇಲ್ಲ ಎಂಬುದು ಗೊತ್ತಾಗುತ್ತದೆ. ನಾನು ಎಲ್ಲಾ ಪಕ್ಷದ ಪರವಾಗಿ ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಬಹಳ ಅನ್ಯಾಯ.

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಮುಖ್ಯಮಂತ್ರಿಗಳು ಕನಿಷ್ಟಪಕ್ಷ ಒಂದು ರೂಪಾಯಿಯನ್ನಾದರೂ ಕೊಡುತ್ತೇವೆಂದು ಘೋಷಣೆ ಮಾಡಬೇಕು.

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ತಾವು ಅತ್ಯಂತ ಪರಿಣಾಮಕಾರಿಯಾಗಿ ತಮ್ಮ ವಾದವನ್ನು ಮಂಡಿಸಿದ್ದೀರಿ ಮತ್ತು ಸರ್ಕಾರವನ್ನು ಮನವೊಲಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದೀರಿ ಹಾಗೂ

ನಿಮ್ಮ ವಶದಲ್ಲಿರತಕ್ಕಂಥ ಎಲ್ಲಾ ದಾಖಲೆಗಳನ್ನು ಅವರಿಗೆ ಓದಿ ಹೇಳಿದ್ದೀರಿ. ಸರ್ಕಾರ ನಿಮ್ಮ ಎಲ್ಲಾ ಮಾತುಗಳನ್ನು ಕೇಳಿ ತನ್ನ ಪೂರ್ಣ ವಿವೇಚನೆಯಿಂದ, ಯಾವುದು ಸಾಧ್ಯವಿಲ್ಲ ಮತ್ತು ಅಂಥದ್ದೇನು ಆಗಿಲ್ಲ, ಆದ್ದರಿಂದ ನಾವು ಒಪ್ಪಿಕೊಳ್ಳುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಏನಾದರೂ ಆಗಲೇ ಬೇಕೆಂದು ನೀವು, ಆದರೆ ಅದರ ಅಗತ್ಯ ಇಲ್ಲ ಎನ್ನತಕ್ಕಂಥ ನಿಲುವನ್ನು ಅವರು ತೆಗೆದುಕೊಂಡಿದ್ದಾರೆ. ನಾನು ಸೌಜನ್ಯದಿಂದ ಇಷ್ಟು ಹೊತ್ತು ತಮ್ಮೆಲ್ಲರ ಜೊತೆ ಸಹಕರಿಸಿಕೊಂಡು, ಎಲ್ಲೋ ಒಂದು ಕಡೆ ಅವರೇನಾದರೂ ಪುನರ್ ವಿಮರ್ಶೆ ಮಾಡುತ್ತಾರೇನೋ ಅಥವಾ ನೀವು ನಿಮ್ಮ ನಿಲುವನ್ನು ಪುನರ್‌ವಿಮರ್ಶೆ ಮಾಡಿಕೊಳ್ಳತ್ತೀರೇನೋ ಎಂದು ನಾನು ಕುಳಿತು ಕೊಂಡಿದ್ದೇನೆ. ಈಗ ಸಮಯ ಹೆಚ್ಚಾಗಿದೆ. ಇವತ್ತು ಕಡೆಯ ದಿವಸವಾಗಿರುವುದರಿಂದ ಬಿ.ಡಿ.ಎ. ಬಿಲ್ ತೆಗೆದುಕೊಳ್ಳಬೇಕಾದದು ನನ್ನ ಮುಖ್ಯ ಜವಾಬ್ದಾರಿಯಾಗಿದೆ. ಅದರ ಜೊತೆಗೆ ಎಲ್ಲಾ ಸದಸ್ಯರು ಸುಮಾರು ನೋಟೀಸ್‌ಗಳು ಬಾಕಿ ಇದೆ ಮತ್ತು ಇದಕ್ಕೆಲ್ಲಾ ಅವಕಾಶ ಕೊಡುತ್ತೇನೆಂದು ಎಲ್ಲರಿಗೂ ಮಾತು ಕೊಟ್ಟಿದ್ದೇನೆ. ಆಗಲೇ ಮಾನ್ಯ ಗೋವಿಂದ ಕಾರ್‌ಜೋಳ್‌ರವರು ಬಹಳ ಬೇಸರದಿಂದ ಮಾತನಾಡಿದ್ದಾರೆ, ಅವರು ಹೇಳುವುದು ನಿಜ. ಕಡೇ ಬೆಂಚ್‌ನಲ್ಲಿ ಕುಳಿತುಕೊಂಡಿರುತ್ತಾರೆ. ಅವರಿಗೂ ಸಮಸ್ಯೆ ಇರುತ್ತದೆ. ಹಾಗೇಯೇ ಅನೇಕ ಜನರ ಸಮಸ್ಯೆಗಳು ಇರುತ್ತವೆ. ಆದ್ದರಿಂದ ತಾವು ದಯಮಾಡಿ ಎಲ್ಲಾ ರೀತಿಯಿಂದ ಆಲೋಚನೆ ಮಾಡಿ ನನ್ನ ಜೊತೆ ಸಹಕರಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಯಾವ್ಯಾವ ಬಿಲ್‌ಗಳನ್ನು ತೆಗೆದು ಕೊಂಡಿದ್ದೀರೋ ಆ ಎಲ್ಲಾ ಬಿಲ್‌ಗಳಿಗೆ ನಮ್ಮ ಸಹಕಾರವನ್ನು ಕೊಟ್ಟಿದ್ದೇವೆ. ಸರ್ಕಾರದ ಕೆಲಸವನ್ನು ನಿಲ್ಲಿಸತಕ್ಕಂಥ ಯಾವುದೇ ಕೆಲಸವನ್ನು ನಾವು ಮಾಡಿಲ್ಲ. ಈಗ ಏನು ಪ್ರಶ್ನೆ ಬಂದಿದೆ ಎಂದರೆ, ಇದರಲ್ಲಿ ಸರ್ಕಾರದವರು ಇನ್ವಾಲ್ವ್ ಆಗಿಲ್ಲವೆಂದು ಅವರೇ ಹೇಳುತ್ತಿದ್ದಾರೆ. ಆದರೆ ನಮ್ಮಲ್ಲಿರತಕ್ಕಂಥ ಪತ್ರವ್ಯವಹಾರಗಳನ್ನು ಮತ್ತು ಕೆಲವು ಪತ್ರಗಳನ್ನು ನೋಡಿದಾಗ, ಆ ವಿಚಾರಗಳಿಗೆ ಇಲ್ಲಿರತಕ್ಕಂಥ ಪ್ರೊಸೀಡಿಂಗ್ಸ್ ಆಗಲಿ, ಮಾಹಿತಿಗಳಾಗಲಿ ಬಹಳ ವ್ಯತ್ಯಾಸ ಇದೆ. ಇದಕ್ಕಾಗಿಯೇ ನಾವು ಇದನ್ನು ಹೌಸ್ ಕಮಿಟಿಗೆ ರೆಫರ್ ಮಾಡಿ ಎಂದು ಕೇಳುತ್ತಿದ್ದೇವೆ. ಹೌಸ್ ಕಮಿಟಿಯಲ್ಲಿ ನಾವು ಹೇಳಿದ ಹಾಗೆ ನಡೆಯುವುದಿಲ್ಲ ಅಥವಾ ನಾವೇನು ಡಿಕ್ಟೇಟ್ ಮಾಡುವುದಿಲ್ಲ. ತಾವೇ ಆ ಸಮಿತಿಯನ್ನು ಮಾಡುತ್ತೀರಿ, ಅದರಲ್ಲಿ ಸದಸ್ಯರು ಇದನ್ನು ತರಿಸಿ ಪರಿಶೀಲನೆ ಮಾಡಿ ವರದಿ ಕೊಡುತ್ತಾರೆ, ತಾವು ಅದರ ಮೇಲೆ ತೀರ್ಮಾನ ತೆಗೆದುಕೊಳ್ಳಬಹುದು. ಇದರಿಂದ ತಮಗೆ ಏನು ತೊಂದರೆಯಾಗುತ್ತದೆ ?ಇದಕ್ಕಾಗಿಯೇ ಹೌಸ್ ಕಮಿಟಿಯನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ. ಈಗ ಬೇಕಾದರೆ 10 ನಿಮಿಷ ಹೌಸ್‌ನ್ನು ಅಡ್ಜರ್ನ್ ಮಾಡಿ ನಾವು ಅವರಿಗೆ ಕನ್ವಿನ್ಸ್ ಮಾಡುತ್ತೇವೆ. ಪುನಃ ಸಭೆ ಸೇರೋಣ.

ಅಧ್ಯಕ್ಷರು : ಈಗ ಊಟಕ್ಕೆ ಅಡ್ಜರ್ನ್ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಊಟಕ್ಕೆ ಬೇಡ. ಈಗ ಒಂದು 10 ನಿಮಿಷ ಮಾತ್ರ ಮಾಡಿ.

ಅಧ್ಯಕ್ಷರು : ಈಗ ಊಟಕ್ಕೆ ಅಡ್ಜರ್ನ್ ಮಾಡಿ ಪುನಃ ಮೂರು ಗಂಟೆಗೆ ಸಭೆ ಸೇರೋಣ. 10 ನಿಮಿಷ ಮೊದಲು ನೀವು ನನ್ನ ಛೇಂಬರಿಗೆ ಬನ್ನಿ, ಅವರು ಬರುತ್ತಾರೆ, ಆಗ ಏನಾದರೂ

ಮಾತನಾಡುವುದಾದರೆ ಮಾತನಾಡಿ. ಏನಾದರೂ ಒಂದು ತೀರ್ಮಾನಕ್ಕೆ ಬರುವುದಾದರೆ ಅಲ್ಲಿ ಬನ್ನಿ. It is not binding on anybody.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿ) : ಊಟ ಮುಗಿಸಿಕೊಂಡು ಬಂದು ನಿಮ್ಮ ಛೇಂಬರಿನಲ್ಲಿ ಸಭೆ ಸೇರೋಣ.

MR. SPEAKER : We will adjourn for lunch now.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಮಾಡಿದರೆ ಏನಾಗುತ್ತದೆ ? ಊಟ ಪ್ರತಿ ದಿನ ಮಾಡುವುದಿಲ್ಲವೇ ?

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತು ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದ್ದರಿಂದ, ಈ ವಿಷಯಗಳು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬರಬೇಕಾಗಿರುವುದರಿಂದ, ಮಾನ್ಯ ಮುಖ್ಯಮಂತ್ರಿಗಳು ಇರಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಈಶ್ವರಪ್ಪನವರು ಏನು ಹೇಳುತ್ತಾರೆಂದರೆ, ಇವತ್ತು ಕಡೆಯ ದಿವಸವಾಗಿರುವುದರಿಂದ ಬಹಳಷ್ಟು ಮುಖ್ಯ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಮಧ್ಯಾಹ್ನದ ನಂತರ ಸಭೆಯಲ್ಲಿರಬೇಕೆಂದು ಅವರು ಹೇಳುತ್ತಿದ್ದಾರೆ. ನಾನು ನಿಮಗೆ ಹೇಳುತ್ತೇನೆಂದು ಹೇಳಿದ್ದೇನೆ. ನಾವು ಒಂದು ಗಂಟೆ ಬಿಟ್ಟು ಸೇರೋಣ. ಈಗ ನಾವು ಊಟಕ್ಕೆ ಅಡ್ಜರ್ನ್ ಮಾಡೋಣ. 10 ನಿಮಿಷದ ನಂತರ ಅವರು ನಮ್ಮ ಛೇಂಬರಿಗೆ ಬರುತ್ತಾರೆ. If you can arrive at some consensus, let us try to work it out. ಈಗ ಸಭೆಯನ್ನು ಮುಂದೂಡಿ ಪುನಃ 3 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸನ್ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಧರಣಿಯಲ್ಲಿದ್ದರು) : ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದರು, ಸಭೆಯು 3-50 ಗಂಟೆಗೆ ಪುನರ್ ಸಮಾವೇಶಗೊಂಡಿತು.)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಕೊನೆಯ ದಿನ. ಬೇರೆ ಬೇರೆ ವಿಚಾರಗಳ ಬಗ್ಗೆ ನಾವು ಇಲ್ಲಿ ಧರಣಿ ಮಾಡಿ ಪ್ರತಿಭಟಿಸಬೇಕಾಗಿದೆ..

ಅಧ್ಯಕ್ಷರು : ಈಗ ಇದು ಮುಗಿಯಲಿ. ಬಹಳ ಜನ ಮೆಂಬರ್ಸ್ ನಾಲ್ಕೈದು ದಿನಗಳಿಂದ ಶೂನ್ಯವೇಳೆ ಅವಕಾಶ ಪಡೆದುಕೊಳ್ಳಲಾಗಲಿಲ್ಲ. ಅವರುಗಳು ರೈಸ್ ಮಾಡುವ ವಿಚಾರಗಳು ಅನೇಕವಿವೆ. ಮೇಲಿಂದ ಮೇಲೆ ನೀವೇ ಮಾತನಾಡುತ್ತಾ ಇದ್ದರೆ ಅವರುಗಳು ಬೇಸರ ಮಾಡಿಕೊಳ್ಳುತ್ತಾರೆ. ದಯವಿಟ್ಟು ಏನಾದರೂ ಒಂದು ಇತ್ಯರ್ಥವನ್ನು ಮಾಡಿಕೊಳ್ಳಿ. ಭೈರೇಗೌಡರು, ನಾಣಯ್ಯನವರು, ಬಚ್ಚೇಗೌಡರು, ತಾವುಗಳು ಸೇರಿ ಒಂದು ಇತ್ಯರ್ಥವನ್ನು ಮಾಡಿ. ನನಗೆ ಇದು ಸರಿ ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ನನ್ನ ಮೂರು ಬೇಡಿಕೆಗಳನ್ನು ಮಂಡಿಸಿ ಧರಣಿ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಭಾವಿಗೆ ಬಂದು ಧರಣಿ ಕುಳಿತರು)

6. ಬೈವಾಟರ್ ಸಂಸ್ಥೆಗೆ ಗುತ್ತಿಗೆ ನೀಡಿರುವ ಬಗ್ಗೆ ಸದನ ಸಮಿತಿ ನೇಮಿಸುವುದಕ್ಕೆ ಒತ್ತಾಯ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಅಧ್ಯಕ್ಷರೇ ಇಲ್ಲಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕ್ಯಾಬಿನೆಟ್ ನೋಟ್ ಮತ್ತು ಹೆಚ್‌ಯುಡಿ ಡಿಪಾರ್ಟ್‌ಮೆಂಟ್‌ನವರ ಪ್ರೊಸೀಡಿಂಗ್ಸ್, ಬಿಡಬ್ಲ್ಯೂಎಸ್ ಚೇರ್ಮನ್‌ರವರು ಬರೆದ ಪತ್ರಗಳು ಇವೆಲ್ಲವನ್ನೂ ನೋಡಿದಾಗ ಒಂದಕ್ಕೊಂದು ಕಾಂಟ್ರಡಿಕ್ಟರಿಯಾಗಿವೆ. ಇಲ್ಲಿ ನೀವು ಹೇಳಿದ್ದು ಒಂದಾದರೆ, ಅಧ್ಯಕ್ಷರು ಮಾಡಿದ್ದು ಇನ್ನೊಂದು. ಇದನ್ನು ನೋಡಿದಾಗ ಬೆಂಗಳೂರಿನ ಜನತೆಯ ತಲೆಯ ಮೇಲೆ ಇಲ್ಲಿ ಅಧ್ಯಕ್ಷರು ಅಂದರೆ ಬಿಡಬ್ಲ್ಯೂಎಸ್‌ಬಿ ಅಧ್ಯಕ್ಷರು ಎಂದು ಅರ್ಥ. ಇದನ್ನು ಮುಂದುವರಿಸುವುದು ಬೇಡ ಅಂದರೆ ಅವರು ವಾಪಸ್ ತೆಗೆದುಕೊಂಡರೆ ಸಾಕು. ಹೌಸ್ ಕಮಿಟಿಯನ್ನು ಈ ಬಗ್ಗೆ ರಚಿಸಿದರೆ ಸಾಕು. ಹೇಗಾದರೂ ಕಮಿಟಿಯನ್ನು ಅಧ್ಯಕ್ಷರು ರಚನೆ ಮಾಡುತ್ತಾರೆ. ಅದರಲ್ಲಿ ನಮಗೆ ಬೇಕಾದವರು ನೂರಕ್ಕೆ ನೂರರಷ್ಟು ಜನರು ಇರುವುದಿಲ್ಲ. ಕಮಿಟಿಯ ಮುಂದೆ ನಿಮ್ಮ ರಿಕಾರ್ಡ್‌ನ್ನು ಇಟ್ಟು ಅವರು ಅದನ್ನು ಸರಿ ಎಂದು ಹೇಳುವುದಾದರೆ ಮುಂದಿನ ಕೆಲಸವೆನ್ನು ನೀವು ಮಾಡಿ.

ಶ್ರೀ ಸಿ. ಬೈರೇಗೌಡ (ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಬಹಳ ಸ್ಪಷ್ಟವಾಗಿ ಎಲ್ಲಾ ವಿಚಾರಗಳಲ್ಲಿಯೂ ಉತ್ತರವನ್ನು ಕೊಟ್ಟಿದ್ದಾರೆ. ಅವರಲ್ಲಿ ಏನು ಸಾಮರ್ಥ್ಯವಿದೆ ಅದೆಲ್ಲವನ್ನೂ ಬಳಸಿಕೊಂಡು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಅವರ ಸ್ನೇಹಿತರ ಮನಸ್ಸನ್ನು ಕರಗಿಸತಕ್ಕಂಥ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದಾರೆ. ಆದರೆ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಸ್ನೇಹಿತರುಗಳು ಇಷ್ಟೊಂದು ಹಠ ಹಿಡಿದು ಕುಳಿತರೆ ಸರಕಾರ ಆ ಬಗ್ಗೆ ಏನು ಎಂದು ಹೇಳುವುದು ಕೂಡ ಕಷ್ಟವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಯಾವ ಕೆಲಸದಲ್ಲಿಯೂ ಕೂಡ ಹಠ ಮಾಡಿಲ್ಲ. ಇಲ್ಲಿ ಅನ್ಯಾಯ ಇದೆ ಎಂದು ಕಂಡುಬಂದುದರಿಂದ ಮಾತ್ರ ಪ್ರಸ್ತಾಪ ಮಾಡುತ್ತಿದ್ದೇವೆಯೇ ಹೊರತು ನಿಮಗೆ ತೊಂದರೆ ಮಾಡಬೇಕೆಂದು ನಮ್ಮ ಉದ್ದೇಶವಲ್ಲ.

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ನೀರಿನ ದರವನ್ನು ನಿಗದಿಮಾಡಲು ಕಮಿಟಿಯನ್ನು ಮಾಡಿದ್ದೇವೆ. ಯಾವರೀತಿಯಲ್ಲಿ ನಾವು ಬೆಂಗಳೂರು ನಗರಕ್ಕೆ ನೀರನ್ನು ತರಬೇಕಾಗಿದೆಯೋ, ಅಷ್ಟು ದೊಡ್ಡ ಪ್ರಮಾಣದ ನೀರನ್ನು ನಾವು ಎಷ್ಟು ಹಣ ಕೊಟ್ಟು ಪಡೆದುಕೊಳ್ಳಬೇಕೆನ್ನುವ ಬಗ್ಗೆ ನಾವು ನೆಗೋಸಿಯೇಶನ್ ಕಮಿಟಿಗೆ ಕೊಟ್ಟಿದ್ದೇವೆ. ಆ ನೆಗೋಸಿಯೇಶನ್ ಕಮಿಟಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ನ ಚೇರ್ಮನ್ ಒಬ್ಬರೇ ಇಲ್ಲ. ಗೌರವಾನ್ವಿತ ಲಾ ಮತ್ತು ಫೈನಾನ್ಸ್ ಸೆಕ್ರೆಟರಿಯವರುಗಳು ಇದ್ದಾರೆ. ಈ ನಗರಕ್ಕೆ ಮೊದಲ ಮತ್ತು ಎರಡನೇ ಹಂತದ ನೀರನ್ನು ತಂದ ರಿಟೈರ್ಡ್ ಚೀಫ್ ಇಂಜಿನಿಯರ್ ಗುಲಾಂ ಅಹಮದ್‌ರವರು ಇದ್ದಾರೆ. ಹೀಗೆ